ಬೆಂಗಳೂರು ನಗರದಲ್ಲಿ ಕೊಳಚೆ ನಿವಾಸಿಗಳಿಗೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಹಕ್ಕುಪತ್ರ ವಿತರಿಸುವ ಬಗ್ಗೆ

188-ಶ್ರೀ ಆರ್.ವಿ. ದೇವರಾಜ್ (ಚಾಮರಾಜಪೇಟೆ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳೆಷ್ಟು?

ಆ) ಅವುಗಳಲ್ಲಿ ವಾಸಿಸುವ ಜನಸಂಖ್ಯೆ ಎಷ್ಟು?

ಇ) ಜನವರಿ 1993ರಿಂದ ಡಿಸೆಂಬರ್ ಅಂತ್ಯದವರೆಗೆ ಕೊಳಚೆ ನಿರ್ಮೂಲನ ಮಂಡಳಿವತಿಯಿಂದ ಎಷ್ಟು ಹಕ್ಕು ಪತ್ರಗಳನ್ನು ಅಂತಹ ಕೊಳಚೆ ಪ್ರದೇಶದ ನಿವಾಸಿಗಳಿಗೆ ವಿತರಿಸಲಾಗಿದೆ.

(ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಈ) 1994ರಲ್ಲಿ ಎಷ್ಟು ಜನರಿಗೆ ಹಕ್ಕುಪತ್ರಗಳನ್ನು ನೀಡಲಾಗುವುದು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಸುಮಾರು 401 ಕೊಳಚೆ ಪ್ರದೇಶಗಳು ಇರುವುದಾಗಿ ಗುರುತಿಸಿದೆ.

ಆ) ಅಂದಾಜು 5.00 ವರ್ಷ

ಇ) ಜನವರಿ 1993ರಿಂದ ಡಿಸೆಂಬರ್ 93ರವರೆಗೆ ಈ ಕೆಳಕಂಡಂತ ಕ್ಷೇತ್ರಗಳಲ್ಲಿ ಮನೆಗಳ ಹಕ್ಕುಪತ್ರಗಳನ್ನು ವಿತರಿಸಲಾಗಿದೆ.

1. ಜಯನಗರ - 67
2. ಬಿನ್ನಿಪೇಟೆ - 20
3. ಬಸವನಗುಡಿ - 10
4. ಚಾಮರಾಜಪೇಟೆ - 340

ಈ) ಮಂಡಳಿಯಲ್ಲಿ 2915 ಮನೆಗಳು ನಿರ್ಮಾಣ ಹಂತದಲ್ಲಿವೆ. ಈ ಮನೆಗಳು ಪೂರ್ಣಗೊಂಡ ನಂತರ ಅರ್ಹ ಫಲಾನುಭವಿಗಳಿಗೆ ನೀಡಲಾಗುವುದು.

1993ರಲ್ಲಿ ಕೊಳಚೆ ನಿರ್ಮೂಲನ ಮಂಡಳಿ ಕೈಗೊಂಡ ಅಭಿವೃದ್ಧಿ ಕಾರ್ಯಗಳಿಗೆ ಖರ್ಚಾದ ಹಣದ ಬಗ್ಗೆ

189 -ಶ್ರೀ ಆರ್.ವಿ. ದೇವರಾಜ್ (ಚಾಮರಾಜಪೇಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಜನವರಿ 1993ರಿಂದ ಡಿಸೆಂಬರ್ ಅಂತ್ಯದವರೆಗೆ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಹಣವೆಷ್ಟು?

(ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಕೊಳಚೆ ಪ್ರದೇಶಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳಾವುವು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ಬೆಂಗಳೂರು ನಗರದಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿ ಹಾಗೂ ವಸತಿ ಗೃಹ ಯೋಜನೆಗಾಗಿ 1993ರ ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ ಖರ್ಚು ಮಾಡಿರುವ ಹಣದ ವಿವರ ಈ ರೀತಿ ಇರುತ್ತದೆ.

ವಿಧಾನಸಭಾ ಕ್ಷೇತ್ರದ ಹೆಸರು	ಖರ್ಚು ಮಾಡಿರುವ ಹಣ (ಲಕ್ಷ ರೂ.ಗಳಲ್ಲಿ)
1. ಮಲ್ಲೇಶ್ವರಂ	7.21
2. ಗಾಂಧೀನಗರ	1.52
3. ಶಾಂತಿನಗರ	1.16
4. ಚಿಕ್ಕಪೇಟೆ	1.14
5. ವರ್ತೂರು	3.15
6. ಬಿನ್ನಿಪೇಟೆ	4.65
7. ಚಾಮರಾಜಪೇಟೆ	5.15
8. ಜಯನಗರ	10.25
9. ಭಾರತೀನಗರ	1.50
10. ರಾಜಾಜಿನಗರ	2.64
11. ಶಿವಾಜಿನಗರ	-
12. ಜಯಮಹಲ್	0.79
13. ಬಸವನಗುಡಿ	2.50
14. ಉತ್ತರಹಳ್ಳಿ	63.18
15. ಯಲಹಂಕ	-

ಪ್ರಸಕ್ತ 93-94 ಸಾಲಿನಲ್ಲಿ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ ಕೊಳಚೆ ಪ್ರದೇಶಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರ ಈ ರೀತಿ ಇರುತ್ತದೆ.

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು 5 ಕೊಳಚೆ ಪ್ರದೇಶಗಳಲ್ಲಿ ಕಿರುನೀರು ಸರಬರಾಜು, ಶೌಚಗೃಹದ ದುರಸ್ತಿ, ಮಳೆನೀರಿನ ಚರಂಡಿ ಶೌಚಗೃಹ ನಿರ್ಮಾಣ ಸ್ನಾನ ಗೃಹ ನಿರ್ಮಾಣ ಹಾಗೂ ಕುಡಿಯುವ ನೀರಿನ ಕಾಮಗಾರಿಗಳನ್ನು ರೂ. 6.80 ಲಕ್ಷ ವೆಚ್ಚದಲ್ಲಿ 1993-94ರಲ್ಲಿ ಕೈಗೊಳ್ಳಲಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆಯು ಚಾಮರಾಜಪೇಟೆಯ ಕೊಳಚೆ ಪ್ರದೇಶಗಳಲ್ಲಿ 1993-94ನೇ ಸಾಲಿನಲ್ಲಿ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಕೊಳಚೆ ಪ್ರದೇಶಗಳ ಅಭಿವೃದ್ಧಿ ಪಡಿಸಲು (ಮೆಟಲಿಂಗ್ ಮಾಡುವುದು), ಚರಂಡಿ ದುರಸ್ತಿ, ಡಾಂಬರು ಹಾಕುವುದು, ಲೈಬ್ರರಿ ಕೊಠಡಿ ನಿರ್ಮಾಣ, ರಸ್ತೆ ಬದಿಯಲ್ಲಿರುವ ಮಣ್ಣನ್ನು ಎತ್ತುವುದು, ಕಲ್ವರ್ಟ್ ಮಾಡುವ ಕೆಲಸ ಮಳೆನೀರಿನ ಚರಂಡಿ ವ್ಯವಸ್ಥೆ ಮಾಡುವ ಕೆಲಸ ಕುಡಿಯುವ ನೀರಿನ ಪೂರೈಕೆ ಹಾಗೂ ಶೇಕಡ 18ರ ಅಡಿಯಲ್ಲಿ ವಿದ್ಯುತ್ ದೀಪ ಒದಗಿಸುವ ವ್ಯವಸ್ಥೆ ಮುಂತಾದ ಕಾರ್ಯಕ್ರಮಗಳನ್ನು ಸುಮಾರು ರೂ. 13.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಂಗಳೂರು ನಗರದಲ್ಲಿರುವ ಹಳೇ ನೀರಿನ ಪೈಪುಗಳ ಬದಲಾವಣೆ ಕುರಿತು

190- ಶ್ರೀ ಆರ್. ವಿ ದೇವರಾಜ್ (ಚಾಮರಾಜಪೇಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಯಾವ ಯಾವ ಭಾಗಗಳಲ್ಲಿ ಹಳೆಯ ಪೈಪುಗಳನ್ನು ಬದಲಾಯಿಸಬೇಕಾಗಿದೆ?